ದಿನಾಂಕ: 06.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ** : ಅರ್ಜಿದಾರ ಪರ ವಕೀಲರಿಂದ:

ನನ್ನ ಮಗನ ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ಹಾಜರಪಡಿಸಿದ್ದು, ಅದನ್ನು ನಿಪಿ.29 ಎಂದು ಗುರುತಿಸಲಾಯಿತು.

**ಪಾಟಿ ಸವಾಲು: 2ನೇ ಎದುರುದಾರ ಪರ ವಕೀಲರಾದ ಶ್ರೀ ಎ.ಎ.ಪಿ ರವರಿಂದ:**

1) ಲೋಹಿತ ನನ್ನ ಮಗ ಎಂದರೆ ಸರಿ. ಅವನಿಗೆ 17 ವರ್ಷ ವಯಸ್ಸಾಗಿದೆ. ಅವನು 8ನೇ ತರಗತಿವರೆಗೆ ಓದಿ, ಈಗ ಶಾಲೆ ಬಿಟ್ಟು ಖಾಲಿ ಇರುತ್ತಾನೆ. ಲೋಹಿತ ಅವರು ಶಾಲೆ ಬಿಟ್ಟ ಬಗ್ಗೆ ಮಾನ್ಯ ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರಪಡಿಸಿಲ್ಲ ಎಂದರೆ ಸರಿ. ಲೋಹಿತ ರವರು ಶಿವಾಪೂರ ಗ್ರಾಮದ ಸರಕಾರಿ ಶಾಲೆಯಲ್ಲಿ ಓದುತ್ತಿದ್ದನು.

2) ನಾವು ಖಾಯಂವಾಗಿ ಮುಧೋಳ ತಾಲೂಕಿನ ಬೆಳಗಲಿ ಗ್ರಾಮದ ನಿವಾಸಿಗಳು ಎಂದರೆ ಸರಿ. ಶಿವಾಪೂರ ಗ್ರಾಮದಿಂದ ಮೂಡಲಗಿ ಪಟ್ಟಣವು 4 ಕಿ.ಮೀ ಅಂತರದಲ್ಲಿದೆ. ಸದರಿ ರಸ್ತೆ ಡಾಂಬರ ರಸ್ತೆ ಇರುತ್ತದೆ. ಸದರಿ ರಸ್ತೆ ಸಿಂಗಲ್ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಖಾಯಂವಾಗಿ ವಾಹನ ಸಂಚಾರ ಇರುತ್ತದೆ ಎಂದರೆ ಸರಿ. ಅಲ್ಲಿ ವಾಹನಗಳ ಸಂಚಾರ ಜಾಸ್ತಿ ಇದಿದ್ದರಿಂದ ವಾಹನಗಳು ನಿಧಾನವಾಗಿ ಚಲಿಸುತ್ತವೆ ಎಂದರೆ ಸರಿ. ಬಾಳಪ್ಪ ಮೂಡಲಗಿಯಿಂದ ಶಿವಾಪೂರ ಕಡೆ ಸದರಿ ದಿನದಂದು ಸ್ಲೆಂಡರ್ ಮೋಟಾರ್

ಸೈಕಲ್ ನಂ.ಕೆಎ-49/ಇಬಿ-3951 ಗಾಡಿಯಲ್ಲಿ ಹಿಂದೆ ಕುಳಿತುಕೊಂಡು ಹೋಗುತ್ತಿದ್ದ. ಎದುರುಗಡೆಯಿಂದೆ ಅಂದರೆ ಶಿವಾಪೂರದಿಂದ ಮೂಡಲಗಿ ಕಡೆಗೆ ಹಿರೋ ಎಚ್.ಎಫ್. ಡಿಲಕ್ಸ್ ಮೋಟಾರ್ ಸೈಕಲ್ ನಂ.ಕೆಎ-49/ಎಸ್-4784 ಬರುತ್ತಿತ್ತು ಎಂದರೆ ಸರಿ. ಲೋಹಿತ ಕುಳಿತಿದ್ದ ಮೋಟಾರ್ ಸೈಕಲ್ ಮೇಲೆ 4 ಜನ ಸವಾರರು ಇದ್ದರು ಎಂದರೆ ಸರಿ. 4 ಜನ ಇದ್ದ ಕಾರಣ ಗಾಡಿ ನಿಧಾನವಾಗಿ ಹೋಗುತ್ತಿತ್ತು ಎಂದರೆ ಸರಿಯಲ್ಲ.

3) ಸದರಿ ದಿನದಂದು ಲೋಹಿತ ಕುಳಿತುಕೊಂಡಿದ್ದ ಗಾಡಿ ಮತ್ತು ಎದುರುಗಾಡಿ ಎದುರು-ಬದರು ಡಿಕ್ಕಿಪಡಿಸಿ ನಡು ರಸ್ತೆಯಲ್ಲಿ ಅಪಘಾತವಾಗಿರುತ್ತದೆ ಎಂದರೆ ಸರಿ. ಸದರಿ ಅಪಘಾತದ ನಂತರ ಲೋಹಿತನಿಗೆ ಪ್ರಜ್ಞೆ ಇರಲಿಲ್ಲ, ನಾಲ್ಕು ದಿನಗಳ ನಂತರ ಅವನಿಗೆ ಪ್ರಜ್ಞೆ ಬಂದಿರುತ್ತದೆ. ಆಗ ಲೋಹಿತ ಇವರನ್ನು ಗೋಕಾಕದ ಉಮರಾಣಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಲೋಹಿತ ರವರು ಆಸ್ಪತ್ರೆಯಲ್ಲಿ 15 ದಿನ ಚಿಕಿತ್ಸೆ ಪಡೆದಿರುತ್ತಾನೆ.

4) ಲೋಹಿತ ರವರಿಗೆ ವೈದ್ಯರು ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆಯನ್ನು ಮಾಡಿರುತ್ತಾರೆ. ಲೋಹಿತ ರವರಿಗೆ ಗುಣಮುಖವಾದ ನಂತರ ವೈದ್ಯರು ಆಸ್ಪತ್ರೆಯಿಂದ ಬಿಡುಗಡೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಸ್ಪತ್ರೆಯ ಚಿಕಿತ್ಸೆಗಾಗಿ ನಾವು ರೂ.4 ಲಕ್ಷ ಖರ್ಚು ಮಾಡಿರುತ್ತೇನೆಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಉಮರಾಣಿ ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಸದರಿ ಆಸ್ಪತ್ರೆಯಲ್ಲಿ ಮುಂದುವರೆದ ಚಿಕಿತ್ಸೆ

ಪಡೆದುಕೊಂಡಿರುತ್ತೀರಾ? ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಮುಂದುವರೆದ ಚಿಕಿತ್ಸೆಗಾಗಿ ರೂ.3 ಲಕ್ಷ ರೂಪಾಯಿ ಹಣ ಬೇಕಾಗುತ್ತದೆ ಎಂದು ನನ್ ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿರುವುದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ.

5) ಲೋಹಿತ ರವರು ಅಪಘಾತಕ್ಕಿಂತ ಮುಂಚೆ ಶಾಲೆಗೆ ಹೋಗುತ್ತಿದ್ದ, ಆದರೆ ಅಪಘಾತವಾದ ನಂತರ ಶಾಲೆಗೆ ಒಂದು ದಿನ ಹೋಗುತ್ತಾರೆ ಕೆಲವೊಂದು ಭಾರಿ ಹೋಗುವುದನ್ನು ಬಿಟ್ಟಿರುತ್ತಾರೆ. ಲೋಹಿತ ಅಪಘಾತವಾಗುವದಕ್ಕಿಂತ ಮುಂಚೆ ಯಾವ ರೀತಿಯಾಗಿ ಚಟುವಟಿಕೆಗಳನ್ನು ಮಾಡಿಕೊಂಡಿದ್ದರೋ, ಅದೇ ರೀತಿ ಈಗಲೂ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಲೋಹಿತ ರವರಿಗೆ ನೆನಪಿನ ಶಕ್ತಿ ಕಡಿಮೆಯಾಗಿರುತ್ತದೆ ಎಂದು ಹೇಳುತ್ತಾರೆ. ಸದರಿ ಅಪಘಾತವು ಎದುರು ಬರುತ್ತಿದ್ದ ಗಾಡಿಯ ಸವಾರನ ತಪ್ಪಿನಿಂದ ನಡೆದಿರುತ್ತದೆ ಎಂದರೆ ಸರಿಯಲ್ಲ.

6) ಅಪಘಾತ ನಡೆದ ವೇಳೆಯಲ್ಲಿ ಎದುರು ಬರುತ್ತಿದ್ದ ಗಾಡಿಯ ಚಾಲಕ, ಚಾಲನಾ ಪತ್ರ ಹೊಂದಿಲ್ಲ ಮತ್ತು ಆತನ ವಾಹನ ವಿಮೆ ಹೊಂದಿರಲಿಲ್ಲಾ ಕಾರಣ, ಪೋಲಿಸರು ಆತನ ವಿರುದ್ದ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಅಪಘಾತವು ಎದುರು ಬರುತ್ತಿದ್ದ ಗಾಡಿ ಸವಾರನ ತಪ್ಪಿನಿಂದ ನಡೆದಿದ್ದರಿಂದ 4 ದಿನಗಳ ನಂತರ ಸುಳ್ಳು ದೂರನ್ನು ಲೋಹಿತ ಕುಳಿತಿದ್ದ ಗಾಡಿಯ ವಿರುದ್ದ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಿನದಂದು ಮೋಟಾರ್ ಸೈಕಲ್ ನಂ.ಕೆಎ-49/ಇಬಿ-3951 ವಾಹನದ ಚಾಲಕನ ತಪ್ಪು

ನಡೆದಿರುವುದಿಲ್ಲಾ ಎಂದರೆ ಸರಿಯಲ್ಲ. ಲೋಹಿತನಿಗೆ ಶಾರೀರಿಕ ಅಂಗನ್ಯೂನ್ಯತೆ ಇಲ್ಲದೇ ಇದ್ದರೂ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲು**: 1 & 3ನೇ ಎದುರುದಾರರು ಎಕಪಕ್ಷಿಯವಾಗಿದ್ದರಿಂದ ಪಾಟಿ ಸವಾಲು ಇಲ್ಲಾ ಎಂದು ಪರಿಗಣಿಸಲಾಯಿತು.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಶಾಂತಮ್ಮ ಮಲ್ಲಿಕಾರ್ಜುನಗೌಡ ಪಿ.)
ಹಿರಿಯ ದಿವಾಣಿ ನ್ಯಾಯಾಧೀಶರು,
ಮೂಡಲಗಿ

ಸಾಕ್ಷಿಯ ಸಹಿ